# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ವಾರ್ಷಿಕ ವರದಿ (01.04.2008 ರಿಂದ 31.03.2009)

## 1. ಸಾಮಾನ್ಯ

ರಾಜ್ಯ ಶಾಸಕಾಂಗದ ಪ್ರತ್ಯೇಕ ಕಾಯ್ದೆಯಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 16.01.1976 ರಿಂದ ಅಸ್ತಿತ್ವದಲ್ಲಿ ಬಂದಿದೆ. ಈ ಪ್ರಾಧಿಕಾರವು ಹಿಂದಿನ ಸ್ಥಳೀಯ ಯೋಜನಾ ಪ್ರಾಧಿಕಾರದ ನಗರ ಯೋಜನಾ ಕಾರ್ಯಗಳನ್ನು ಹಾಗೂ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಅಭಿವೃದ್ಧಿ ಕಾರ್ಯಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ.

## 2. ಚಟುವಟಿಕೆಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿದೆ.

(1) ಯೋಜನೆ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961 ರಡಿಯಲ್ಲಿ ಯೋಜನಾ ಪ್ರಾಧಿಕಾರವನ್ನಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಗೊತ್ತುಪಡಿಸಲಾಗಿದೆ. ಯೋಜನಾ ಚಟುವಟಿಕೆಗಳು ಸಂಕ್ಷಿಪ್ತವಾಗಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

- ಬೆಂಗಳೂರು ನಗರಕ್ಕೆ ಅಭಿವೃದ್ಧಿ ನಕ್ಷೆ ತಯಾರಿಸುವುದು.
- ಯೋಜನಾ ನಕ್ಷೆ ತಯಾರಿಸುವುದು.
- ಸಮೂಹ ವಸತಿಗಾಗಿ ಅಭೀವೃದ್ಧಿ ನಕ್ಷೆ ಹಾಗೂ ಬಡಾವಣೆ ನಕ್ಷೆ ಅನುಮೋದಿಸುವುದು.
- ಕಟ್ಟಡ ನಕ್ಷೆ ಅನುಮೋದಿಸುವುದು (ಪ್ರಾಧಿಕಾರದ ವ್ಯಾಪ್ತಿಯಲ್ಲಿ).
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಇತರೆ ಶಾಸನಬದ್ದ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವುದು.

(2) ಅಭಿವೃದ್ಧಿ:

ಯೋಜನಾ ಚಟುವಟಿಕೆಗಳ ಕಾರ್ಯದ ಜೊತೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಸಹಾ ಕೈಗೊಳ್ಳಬೇಕಾಗಿರುತ್ತದೆ.

- ಈ ಕೆಳಕಂಡ ಯೋಜನೆಗಳ ರೂಪುರೇಷೆಗಳನ್ನು ರಚಿಸಲು
  ವಸತಿ ನಿವೇಶನಗಳು
  ವಾಣಿಜ್ಯ ನಿವೇಶನಗಳು
  ಕೈಗಾರಿಕಾ ನಿವೇಶನಗಳು
  ನಾಗರಿಕ ಸೌಲಭ್ಯ ನಿವೇಶನಗಳು ಮತ್ತು ಉದ್ಯಾನವನ ಹಾಗೂ ಆಟದ ಮೈದಾನ
- ವಾಣಿಜ್ಯ ಸಂಕೀರ್ಣಗಳ ನಿರ್ಮಾಣ
- ಆರ್ಥಿಕವಾಗಿ ಹಿಂದುಳಿದವರಿಗೆ/ಕಡಿಮೆ ವರಮಾನದ ವರ್ಗದವರಿಗೆ/ಮಧ್ಯಮ ವರಮಾನದ ವರ್ಗದವರಿಗೆ/ಅಧಿಕ ವರಮಾನದ ವರ್ಗದವರಿಗೆ ಮನೆಗಳ ನಿರ್ಮಾಣ
- ಪ್ರಧಾನವಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ

## 3. ಪ್ರಾಧಿಕಾರದ ರಚನೆ

01.04.2008 ರಿಂದ 31.03.2009ರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಪದನಾಮ | ಹೆಸರು | ಅವಧಿ |
|---|---|---|---|
| 1 | ಅಧ್ಯಕ್ಷರು<br>ಬೆಂಅಪ್ರಾ., ಬೆಂಗಳೂರು. | 1) ಶ್ರೀ ದಿಲೀಪ್ ರಾವ್, ಐಎಎಸ್.,<br>2) ಶ್ರೀ ಪ್ರಹ್ಲಾದ್ ಬಿ.ಮಹಿಷಿ, ಐಎಎಸ್., | 01.04.2008 ರಿಂದ 16.06.2008<br>16.06.2008 ರಿಂದ 31.03.2009 |
| 2 | ಆಯುಕ್ತರು,<br>ಬೆಂಅಪ್ರಾ., ಬೆಂಗಳೂರು. | 1) ಶ್ರೀ ಸಿದ್ದಯ್ಯ, ಐಎಎಸ್., | |
| 3 | ಆರ್ಥಿಕ ಸದಸ್ಯರು,<br>ಬೆಂಅಪ್ರಾ., ಬೆಂಗಳೂರು. | 1) ಶ್ರೀ ಎಂ ಎನ್ ಶೇಷಪ್ಪ, ಎಂ.ಎ<br>2) ಶ್ರೀ ಎಲ್ ನರಸಿಂಹಮೂರ್ತಿ (ಪ್ರಭಾರ)<br>3) ಶ್ರೀ ಆರ್. ಮಹೇಶ್ವರಪ್ಪ | 01.04.2008 ರಿಂದ 30.06.2008<br>30.06.2008 ರಿಂದ 10.11.2008<br>10.11.2008 ರಿಂದ |
| 4 | ಅಭಿಯಂತರ ಸದಸ್ಯರು,<br>ಬೆಂಅಪ್ರಾ., ಬೆಂಗಳೂರು. | 1) ಶ್ರೀ ಪಿ.ಎನ್ ನಾಯಕ್, ಕೆಇಎಸ್.,<br>2) ಶ್ರೀ ಬಿ ಶಿವಶಂಕರ್,<br>3) ಶ್ರೀ ಟಿ.ಡಿ ನಂಜುಂಡಪ್ಪ, ಬಿ.ಇ,(ಪ್ರಭಾರ)<br>4) ಶ್ರೀ ಆರ್ ಶ್ರೀನಿವಾಸ್, ಬಿ.ಇ. | 01.04.2008 ರಿಂದ 07.07.2008<br>07.07.2008 ರಿಂದ 06.11.2008<br>06.11.2008 ರಿಂದ 19.02.2009<br>19.02.2009 ರಿಂದ |
| 5 | ನಗರ ಯೋಜನಾ ಸದಸ್ಯರು,<br>ಬೆಂಅಪ್ರಾ., ಬೆಂಗಳೂರು. | 1) ಶ್ರೀ ಎ.ವಿ ರಂಗೇಶ್, ಬಿ.ಇ(ಸಿವಿಲ್)<br>ಎಂ.ಪ್ಲಾನಿಂಗ್ | |
| 6 | ಕಾರ್ಯದರ್ಶಿ,<br>ಬೆಂಅಪ್ರಾ., ಬೆಂಗಳೂರು. | 1) ಡಾ॥ ಕೆ.ಎನ್ ಚಂದ್ರಶೇಖರ್, ಕೆಎಎಸ್.,<br>2) ಶ್ರೀ ವಿ ಯಶವಂತ್, ಕೆಎಎಸ್., | 01.04.2008 ರಿಂದ 30.06.2008<br>30.06.2008 ರಿಂದ |
| 7 | ಸರ್ಕಾರದ ಪ್ರಧಾನ<br>ಕಾರ್ಯದರ್ಶಿಗಳು,<br>ನಗರಾಭಿವೃದ್ಧಿ ಇಲಾಖೆ. | 1) ಶ್ರೀ ಜ್ಯೋತಿರಾಮಲಿಂಗಂ, ಐಎಎಸ್.,<br>2) ಶ್ರೀ ಡಿ ತಂಗರಾಜ್, ಐಎಎಸ್., | 01.04.2008 ರಿಂದ 04.02.2009<br>04.02.2009 ರಿಂದ |
| 8 | ಆಯುಕ್ತರು,<br>ಬೃಹತ್ ಬೆಂಗಳೂರು<br>ಮಹಾನಗರ ಪಾಲಿಕೆ. | 1) ಶ್ರೀ ಡಾ॥ ಎಸ್. ಸುಬ್ರಮಣ್ಯ, ಐಎಎಸ್., | |
| 9 | ಅಧ್ಯಕ್ಷರು,<br>ಬೆಂಗಳೂರು ಜಲಮಂಡಳಿ | 1) ಶ್ರೀಮತಿ ಲತಾಕೃಷ್ಣರಾವ್, ಐಎಎಸ್.,<br>2) ಶ್ರೀ ಪಿ.ಬಿ. ರಾಮಮೂರ್ತಿ, ಐಎಎಸ್., | 01.04.2008 ರಿಂದ 10.10.2008<br>10.10.2008 ರಿಂದ |
| 10 | ವ್ಯವಸ್ಥಾಪಕ ನಿರ್ದೇಶಕರು,<br>ಬೆಂಗಳೂರು ಮಹಾನಗರ<br>ಸಾರಿಗೆ ಸಂಸ್ಥೆ. | 1) ಶ್ರೀ ಉಪೇಂದ್ರ ತ್ರಿಪಾಠಿ, ಐಎಎಸ್.,<br>2) ಶ್ರೀ ಸೈಯ್ಯದ್ ಜಮೀರ್ ಪಾಷ, ಐಎಎಸ್., | 01.04.2008 ರಿಂದ 16.06.2008<br>16.06.2008 ರಿಂದ |
| 11 | ಮುಖ್ಯವಾಸ್ತುಶಿಲ್ಪಿ,<br>ಕರ್ನಾಟಕ ಸರ್ಕಾರ | 1) ಶ್ರೀ ಕೆ.ಉದಯ್, ಎಐಐಎಪಿಜಿ., ಡಿಬಿಎ.,<br>(ಜನರಲ್) | |
| 12 | ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು. | | |
| **ವಿಶೇಷ ಆಹ್ವಾನಿತರು** | | | |
| 13 | ಸರ್ಕಾರದ ಪ್ರಧಾನ<br>ಕಾರ್ಯದರ್ಶಿಗಳು, ವಸತಿ<br>ಇಲಾಖೆ, ಬೆಂಗಳೂರು. | 1) ಶ್ರೀಮತಿ ರಂಜನಿ ಶ್ರೀಕುಮಾರ್, ಐಎಎಸ್.,<br>2) ಶ್ರೀಮತಿ ಶೋಭಾ ನಂಬಿಸನ್, ಐಎಎಸ್.,<br>3) ಶ್ರೀ ಜಿ.ವಿ.ಕೊಂಗವಾಡ್, ಐಎಎಸ್., | 01.04.2008 ರಿಂದ 11.06.2008<br>11.06.2008 ರಿಂದ 14.10.2008<br>14.10.2008 ರಿಂದ |
| 14 | ಆಯುಕ್ತರು,<br>ಬಿ ಎಂ ಆರ್ ಡಿ ಎ | 1) ಶ್ರೀ ಸುಭೀರ್ ಹರಿಸಿಂಗ್, ಐಎಎಸ್.,<br>2) ಶ್ರೀ ಅಭಿಜಿತ್‌ದಾಸ್ ಗುಪ್ತ, ಐಎಎಸ್., | 01.04.2008 ರಿಂದ 16.06.2008<br>16.06.2008 ರಿಂದ |

**ಸಭೆಗಳು:**

ದಿನಾಂಕ 01.04.2008 ರಿಂದ 31.03.2009ರವರೆಗೆ ಪ್ರಾಧಿಕಾರವು 13 ಸಭೆಗಳನ್ನು ಮತ್ತು 3 ವಿಶೇಷ ಸಭೆಗಳನ್ನು ನಡೆಸಿ 416 ವಿಷಯಗಳನ್ನು ಪರಿಗಣಿಸಿರುತ್ತದೆ.

## 4. ಸಂಘಟನೆ.

ಪ್ರಾಧಿಕಾರವು ಈ ಕೆಳಕಂಡ ವಿಭಾಗಗಳನ್ನು ಹೊಂದಿರುತ್ತದೆ.

(1) ಆಡಳಿತ ವಿಭಾಗ
(2) ಅಭಿಯಂತರ (ಇಂಜಿನಿಯರಿಂಗ್) ವಿಭಾಗ
(3) ನಗರ ಯೋಜನಾ ವಿಭಾಗ
(4) ಭೂಸ್ವಾಧೀನ ವಿಭಾಗ
(5) ಆರ್ಥಿಕ ವಿಭಾಗ
(6) ಕಾನೂನು ವಿಭಾಗ
(7) ಜಾಗೃತದಳ ವಿಭಾಗ
(8) ಸಾರ್ವಜನಿಕ ಸಂಪರ್ಕ ವಿಭಾಗ
(9) ಎಸ್ಟೇಟ್ ವಿಭಾಗ
(10) ಅರಣ್ಯ ಮತ್ತು ತೋಟಗಾರಿಕಾ ವಿಭಾಗ
(11) ಇಡಿಪಿ ವಿಭಾಗ

**ವಿಭಾಗಗಳ ಕಾರ್ಯಗಳು:**

(1) ಆಡಳಿತ ವಿಭಾಗವು ನಿವೇಶನಗಳು, ಅಂಗಡಿಗಳು ಮತ್ತು ಮನೆಗಳ/ಫ್ಲ್ಯಾಟ್‌ಗಳ ಹಂಚಿಕೆಯ ಕಾರ್ಯ, ಆಸ್ತಿ ತೆರಿಗೆ, ಗುತ್ತಿಗೆ ಹಣ ಮತ್ತು ಅಂಗಡಿ ಬಾಡಿಗೆಯನ್ನು ವಸೂಲು ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ. ಅಲ್ಲದೆ ಈ ವಿಭಾಗಕ್ಕೆ ಸಾಮಾನ್ಯ ಆಡಳಿತ ವಿಷಯ ಮತ್ತು ಸಿಬ್ಬಂದಿ ಇವುಗಳ ನಿರ್ವಹಣೆಯ ಜವಾಬ್ದಾರಿಯೂ ಇದೆ.

(2) ನೂತನ ಬಡಾವಣೆಗಳ ನಿರ್ಮಾಣ, ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಅಭಿಯಂತರ ವಿಭಾಗದ ಪ್ರಾಥಮಿಕ ಕರ್ತವ್ಯವಾಗಿರುತ್ತದೆ. ಪ್ರಾಧಿಕಾರದ ಬಡಾವಣೆಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ವಿದ್ಯುಚ್ಛಕ್ತಿ ಕೆಲಸಗಳನ್ನು ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಮೂಲಕ ಕಾರ್ಯಗತಗೊಳಿಸುವುದು; ಅಭಿಯಂತರ ವಿಭಾಗದ ಮುಖ್ಯ ಹೊಣೆಯಾಗಿದೆ.

(3) ಬೆಂಗಳೂರು ಮಹಾನಗರ ಪ್ರದೇಶಕ್ಕೆ ಮಾಸ್ಟರ್ ಪ್ಲಾನ್ ಸಿದ್ಧಪಡಿಸುವುದು ಹಾಗೂ ಹತ್ತು ವರ್ಷಗಳಿಗೊಮ್ಮೆ ಪರಿಷ್ಕರಿಸುವುದು, ನೂತನ ಬಡಾವಣೆ ನಕ್ಷೆಗಳನ್ನು ತಯಾರಿಸುವುದು ಹಾಗೂ ಸಮೂಹ ವಸತಿ ಯೋಜನೆಗಳಿಗೆ ಮತ್ತು ಖಾಸಗಿ ಬಡಾವಣೆಗಳಿಗೆ ಅಭಿವೃದ್ಧಿ ನಕ್ಷೆಯನ್ನು ಅನುಮೋದಿಸುವುದು ಹಾಗೂ ಬೆಂಗಳೂರು ನಗರ ಯೋಜನಾ ಪ್ರಾಧಿಕಾರವಾಗಿ, ಪ್ರಾಧಿಕಾರದ ಪ್ರಕಾರ್ಯಗಳಲ್ಲಿ ನೆರವು ನೀಡುವುದು ನಗರ ಯೋಜನಾ ವಿಭಾಗದ ಹೊಣೆಯಾಗಿದೆ.

(4) ಅಭಿಯಂತರ ವಿಭಾಗದೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು, ಭೂಸ್ವಾಧೀನ ವಿಭಾಗದ ಕೆಲಸವಾಗಿರುತ್ತದೆ.

(5) ವಿವಿಧ ಹಣಕಾಸಿನ ವಿಷಯಗಳಲ್ಲಿ ಪ್ರಾಧಿಕಾರಕ್ಕೆ ಸಲಹೆ ನೀಡುವುದು ಹಾಗೂ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವುದು ಅಲ್ಲದೆ ಪ್ರಾಧಿಕಾರಕ್ಕೆ ಬರಬೇಕಾಗಿರುವ ಬಾಕಿ, ಬೇಡಿಕೆ ಮತ್ತು ವಸೂಲಿಯ ಮೇಲ್ವಿಚಾರಣೆಯನ್ನು ಸಹಾ ನೋಡಿಕೊಳ್ಳುವುದು ಆರ್ಥಿಕ ವಿಭಾಗದ ಹೊಣೆಯಾಗಿರುತ್ತದೆ.

(6) ಜಾಗೃತದಳ ವಿಭಾಗವು ಪ್ರಾಧಿಕಾರದ ಆಸ್ತಿಗಳ ಒತ್ತುವರಿ, ಅನಧಿಕೃತ ಅಕ್ರಮಣಗಳನ್ನು ತೆರೆವುಗೊಳಿಸುವ ಹಾಗೂ ಹಸಿರುಪಟ್ಟಿ ಪ್ರದೇಶವನ್ನು ಸಂರಕ್ಷಿಸುವ ಕಾರ್ಯ ನಿರ್ವಹಿಸುತ್ತದೆ.

(7) ಪ್ರಾಧಿಕಾರಕ್ಕೆ ವಿವಿಧ ಕಾನೂನು ವಿಷಯಗಳಲ್ಲಿ ಸಲಹೆ ನೀಡುವುದು ಹಾಗೂ ವಿವಿಧ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳಲ್ಲಿ ಪ್ರಾಧಿಕಾರದ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಕಾನೂನು ವಿಭಾಗದ ಕರ್ತವ್ಯವಾಗಿರುತ್ತದೆ.

(8) ಪ್ರಾಧಿಕಾರದ ಸಾರ್ವಜನಿಕ ಸಂಪರ್ಕ, ಮಾಧ್ಯಮ ಸಂಪರ್ಕ ಕುರಿತ ಪತ್ರಿಕಾ ಪ್ರಕಟಣೆ, ಸಾರ್ವಜನಿಕ ದೂರು ನಿರ್ವಹಣೆಯನ್ನು ಸಾರ್ವಜನಿಕ ಸಂಪರ್ಕ ವಿಭಾಗವು ನೆರವೇರಿಸುತ್ತದೆ.

(9) ಎಸ್ಟೇಟ್ ವಿಭಾಗವನ್ನು 2007–08ರ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಮಾನ್ಯ ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷಯೆಯ ಸಮಿತಿಯ ಶಿಫಾರಸ್ಸಿನನ್ವಯ ಪ್ರಾರಂಭ ಮಾಡಲಾಗಿದೆ. ಎಸ್ಟೇಟ್ ಅಧಿಕಾರಿಗಳು ಪ್ರಾಧಿಕಾರದ ಸ್ವತ್ತುಗಳ ನಿರ್ವಹಣೆ ಮತ್ತು ಅತಿಕ್ರಮಣಕಾರರಿಂದ ಆಸ್ತಿಯನ್ನು ಸ್ವಾಧೀನತೆ ಪಡೆಯುವ ಕ್ರಮ ನಿರ್ವಹಿಸುತ್ತಾರೆ.

(10) ತೋಟಗಾರಿಕಾ ವಿಭಾಗವು ಪರಿಸರ ಸಂಬಂಧಿ ಕಾರ್ಯಾಚರಣೆ, ಕೆರೆಗಳ ಪುನರುಜ್ಜೀವನ / ನಿರ್ವಹಣೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

(11) ತಾಂತ್ರಿಕ ಮಾಹಿತಿ ವಿಭಾಗವು ಪ್ರಾಧಿಕಾರದ ಕಛೇರಿಗಳ ಗಣಕೀಕರಣ ಮತ್ತು ದಾಖಲೆಗಳ ಗಣಕೀಕರಣ ಕಾರ್ಯವನ್ನು ನಿರ್ವಹಿಸುತ್ತದೆ.

ಪ್ರಾಧಿಕಾರದ ಆಡಳಿತ ವ್ಯವಸ್ಥೆಯ ವಿವರಗಳನ್ನು ವರದಿಗೆ ಲಗತ್ತಿಸಿರುವ ಅನುಬಂಧ 'ಅ' ನಲ್ಲಿ ಕೊಟ್ಟಿದೆ.

## 5. ಆಡಳಿತ ವಿಭಾಗ.

**ಅ) ಸಿಬ್ಬಂದಿ:**

ದಿನಾಂಕ 31.03.2009 ರಲ್ಲಿದ್ದಂತೆ ಪ್ರಾಧಿಕಾರದ ನೌಕರರ ಸಂಖ್ಯಾ ಬಲ 765 ಇದ್ದು, ಅದರಲ್ಲಿ 160 ನಿಯೋಜಿತ ಅಧಿಕಾರಿಗಳು/ ನೌಕರರು ಮತ್ತು 605 ಪ್ರಾಧಿಕಾರದ ನೌಕರರು ಇರುತ್ತಾರೆ.

| | **ಬಿಡಿಎ ವೃಂದ** | **ಅನ್ಯ ಸೇವೆಯ ಮೇಲೆ ನಿಯೋಜನೆ** |
|---|---|---|
| 1) ಗ್ರೂಪ್ 'ಎ' | 04 | 35 |
| 1) ಗ್ರೂಪ್ 'ಬಿ' | 11 | 82 |
| 1) ಗ್ರೂಪ್ 'ಸಿ' | 326 | 43 |
| 1) ಗ್ರೂಪ್ 'ಡಿ' | 264 | -- |
| **ಒಟ್ಟು** | **605** | **160** |

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದ್ದು ಸರ್ಕಾರವು ಅದನ್ನು ದಿನಾಂಕ 05.06.2001 (ನಅಇ 135 ಬೆಂಅಸೇ 2001) ರಲ್ಲಿ ಅನುಮೋದಿಸಿರುತ್ತದೆ.

**ಆ) ವಸತಿ ನಿವೇಶನಗಳ ಹಂಚಿಕೆ:**

ದಿನಾಂಕ 01.04.2008 ರಿಂದ 31.03.2009ರ ವರೆಗೆ ನಿವೇಶನ ಹಂಚಿಕೆಗಾಗಿ ಪ್ರಕಟಣೆ ಹೊರಡಿರುವುದಿಲ್ಲ. ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

**ಇ) ಬಿಡಿ ನಿವೇಶನಗಳು:**

ಸರ್ಕಾರವು ಹೊರಡಿಸಿರುವ ಮಾರ್ಗಸೂಚಿ ಸಂಖ್ಯೆ: ನಅಇ/129/ಎಂಎನ್‌ಜೆ/97 ದಿನಾಂಕ 06.08.97ರ ಪ್ರಕಾರ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ ಬಿಡಿ ನಿವೇಶನ ಹಂಚಿಕೆಯಾಗಿರುವ ವಿವರಗಳನ್ನೊಳಗೊಂಡ ಪಟ್ಟಿಯನ್ನು ಈ ವರದಿಯೊಂದಿಗೆ ಲಗತ್ತಿಸಿದೆ (ಅನುಬಂಧ 'ಅ') 31ನೇ ಮಾರ್ಚ್ 2009ರವರೆಗೆ ಒಟ್ಟು 7 ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

**ಈ) ಬದಲಿ ನಿವೇಶನಗಳು:**

ಮುಂದುವರೆದ ಮೊಕದ್ದಮೆಗಳಿಂದ, ಹಂಚಿಕೆಯಾದ ನಿವೇಶನದಲ್ಲಿನ ಅನಧಿಕೃತ ನಿರ್ಮಾಣಗಳಿಂದ ಹಾಗೂ ನಿವೇಶನದ ಮೇಲೆ ಹೆಚ್‌ಟಿ/ಎಲ್‌ಟಿ ಲೈನ್ ಹಾದುಹೋಗುತ್ತಿರುವ ಕಾರಣಗಳಿಂದ ಹಂಚಿಕೆದಾರರಿಗೆ ಹಂಚಿಕೆಯಾದ ಮೂಲ ನಿವೇಶನಗಳನ್ನು ಒದಗಿಸಲು ಸಾಧ್ಯವಿಲ್ಲದ ಕಾರಣ, ಪ್ರಸಕ್ತ ಸಾಲಿನಲ್ಲಿ ಅಂತಹ ಹಂಚಿಕೆದಾರರಿಗೆ ವಿವಿಧ ಅಳತೆಯ 715 ನಿವೇಶನಗಳನ್ನು ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಲಾಗಿರುತ್ತದೆ.

**ಉ) ಗುತ್ತಿಗೆ ಕರಾರುಪತ್ರ / ಶುದ್ಧ ಕ್ರಯ ಪತ್ರಗಳು:**

ಪ್ರಸಕ್ತ ವರ್ಷದಲ್ಲಿ 3434 ಗುತ್ತಿಗೆ ಕರಾರುಪತ್ರ / ಶುದ್ಧಕ್ರಯ ಪತ್ರಗಳನ್ನು ನೀಡಲಾಗಿರುತ್ತದೆ.

**ಊ) ಹರಾಜು ಮೂಲಕ ನಿವೇಶನ ವಿಲೇವಾರಿ:**

ಪ್ರಸಕ್ತ ವರ್ಷದಲ್ಲಿ ರೂ. 10778.52 ಲಕ್ಷ ಬೆಲೆಯ ಒಟ್ಟು 155 ನಿವೇಶನಗಳನ್ನು ಹರಾಜು ಮಾಡಲಾಗಿದೆ.

**ಋ) ನಾಗರಿಕ ಸೌಲಭ್ಯ ನಿವೇಶನಗಳು:**

01.04.2008 ರಿಂದ 31.03.2009 ರವರೆಗೆ ಒಟ್ಟು 24 ನಾಗರಿಕ ಸೌಲಭ್ಯ ನಿವೇಶನಗಳನ್ನು ಸರ್ಕಾರಿ ಮತ್ತು ಸರ್ಕಾರಿಯೇತರ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದ್ದು, ಅವುಗಳಿಂದ 31,61,00,611/-ರೂಗಳನ್ನು ಸಂಗ್ರಹಿಸಲಾಗಿದೆ.

**(ೠ) ಕಂದಾಯ ವಿಭಾಗಗಳು:**

ಪ್ರಾಧಿಕಾರದಲ್ಲಿ 4 ಕಂದಾಯ ವಿಭಾಗಗಳು ಇರುತ್ತವೆ. ಮಾರ್ಚ್ 2009 ಅಂತ್ಯಕ್ಕೆ 47,642 ಸ್ವತ್ತುಗಳು ಪ್ರಾಧಿಕಾರದ ವ್ಯಾಪ್ತಿಯಲ್ಲಿರುತ್ತವೆ. ಈ ಅವಧಿಯಲ್ಲಿ 3,20,08,595/- ರೂಗಳ ಕಂದಾಯವನ್ನು ಸಂಗ್ರಹಿಸಲಾಗಿದೆ. ಪ್ರಾಧಿಕಾರದಲ್ಲಿ 747 ಮಳಿಗೆಗಳು / ಕಛೇರಿ ಸ್ಥಳಾವಕಾಶವನ್ನೊಳಗೊಂಡಂತೆ 13 ವಾಣಿಜ್ಯ ಸಂಕೀರ್ಣಗಳಿದ್ದು, ಅದರಿಂದ 6,91,12,151/- ರೂಗಳ ಪರವಾನಗಿ ಶುಲ್ಕವನ್ನು ಸಂಗ್ರಹಿಸಲಾಗಿರುತ್ತದೆ.

## 6. ಅಭಿಯಂತರ ವಿಭಾಗ

### (ಅ) ಪ್ರಗತಿಯಲ್ಲಿರುವ ಮೂಲಭೂತ ಸೌಕರ್ಯ ಕಾಮಗಾರಿಗಳು

**1. ಮಾಗಡಿ ರಸ್ತೆ – ಕಾರ್ಡ್ ರಸ್ತೆ ಸಂಧಿಸುವಲ್ಲಿ ಅಂಡರ್ ಪಾಸ್ ನಿರ್ಮಾಣ**

ಈ ಕಾಮಗಾರಿಯನ್ನು 3185.00 ಲಕ್ಷ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಯನ್ನು ಮೆ॥ ಈಸ್ಟ್ ಕೋಸ್ಟ್ ಕನ್ಸ್‌ಟ್ರಕ್ಷನ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್, ಚೆನ್ನೈ, ರವರಿಗೆ ವಹಿಸಲಾಗಿದೆ. ಈ ಅಂಡರ್‌ಪಾಸ್ ಕಾಮಗಾರಿಯನ್ನು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

**2. ಮಾಗಡಿ ರಸ್ತೆಯಿಂದ – ಮೈಸೂರು ರಸ್ತೆಯವರೆವಿಗೂ ಹೊರವರ್ತುಲ ರಸ್ತೆ ನಿರ್ಮಾಣ**

ಜ್ಞಾನಭಾರತಿ ಮೂಲಕ ಹಾದು ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಹೊರವರ್ತುಲ ರಸ್ತೆಯ ವಿನ್ಯಾಸಕ್ಕೆ ಅಭಿವೃದ್ಧಿಗೊಳಿಸಿ ಇದುವರೆವಿಗೂ ಸಂಚಾರಕ್ಕೆ ಉಪಯೋಗಿಸಲಾಗುತ್ತಿತ್ತು.

ಈಗ ಮೈಸೂರು ರಸ್ತೆಯಿಂದ, ಚಂದ್ರಾ ಲೇಔಟ್, ಮಾಳಗಾಲ ಮೂಲಕ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಹೊರವರ್ತುಲ ರಸ್ತೆಯ ಭಾಗದ ಕಾಮಗಾರಿಯನ್ನು 7700.00 ಲಕ್ಷ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಯನ್ನು ಮೆ॥ ಮೈಟಾಸ್ ಇನ್‌ಫ್ರಾ ಪ್ರೈ. ಲಿ., ಹೈದರಾಬಾದ್, ರವರಿಗೆ ವಹಿಸಲಾಗಿದೆ. ಕಾಮಗಾರಿಯು ಮುಕ್ತಾಯವಾಗಿರುತ್ತದೆ.

ಪ್ರಸ್ತುತ ಹೊರವರ್ತುಲ ರಸ್ತೆಯ ಭಾಗವನ್ನು ಸಂಚಾರಕ್ಕೆ ತೆರವುಗೊಳಿಸಿದಲ್ಲಿ, ವಾಹನಗಳು ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಯ ಬಳಿ ದಕ್ಷಿಣ ಭಾಗದ ಹೊರವರ್ತುಲ ರಸ್ತೆಯನ್ನು ಸೇರಲು ಸುಮಾರು 12.00 ಕಿ.ಮೀ. ಕ್ರಮಿಸುವುದು ಉಳಿತಾಯವಾಗುವುದು ಹಾಗೂ ಪ್ರಯಾಣಾವಧಿ ಮತ್ತು ಇಂಧನದಲ್ಲಿ ಉಳಿತಾಯವಾಗುವುದು.

**3. ಹೊರವರ್ತುಲ ರಸ್ತೆ ಹಾಗೂ ಮಾಗಡಿ ರಸ್ತೆ ಸಂಧಿಸುವಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ**

ಈ ಕಾಮಗಾರಿಯನ್ನು 3372.00 ಲಕ್ಷ ರೂ. ವೆಚ್ಚದಲ್ಲಿ ಮೆ॥ ಈಸ್ಟ್ ಕೋಸ್ಟ್ ಕನ್ಸ್‌ಟ್ರಕ್ಷನ್ಸ್ ಅಂಡ್ ಇಂಡಸ್ಟ್ರೀಸ್ ಲಿ., ಚೆನ್ನೈ, ರವರಿಗೆ ವಹಿಸಲಾಗಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿದ್ದು, ಜೂನ್ 2009ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

**4. ನಾಯಂಡಹಳ್ಳಿ ಬಳಿ ಬೆಂಗಳೂರು – ಮೈಸೂರು ರೈಲು ಮಾರ್ಗಕ್ಕೆ ರಸ್ತೆ ಕೆಳ ಸೇತುವೆ (ಅಂಡರ್‌ಪಾಸ್) ಮತ್ತು ಸಂಪರ್ಕ ರಸ್ತೆಯ ನಿರ್ಮಾಣ**

(ಮೈಸೂರು ರಸ್ತೆ – ಮಾಗಡಿ ರಸ್ತೆ ಹೊರವರ್ತುಲ ರಸ್ತೆಯ ಭಾಗ)

ನೈರುತ್ಯ ರೈಲ್ವೆ ಇಲಾಖೆಯು ಬೆಂಗಳೂರು – ಮೈಸೂರು ರೈಲು ಮಾರ್ಗಕ್ಕೆ ರಸ್ತೆ ಕೆಳ ಸೇತುವೆ ಕಾಮಗಾರಿಯನ್ನು 1213.00 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಠೇವಣಿ ಆಧಾರದ ಮೇಲೆ ಕಾಮಗಾರಿ ಕೈಗೊಂಡಿರುತ್ತದೆ. ಈ ಅಂಡರ್‌ಪಾಸ್‌ಗೆ ಸಂಪರ್ಕ ರಸ್ತೆಯ ನಿರ್ಮಾಣವನ್ನು ಗುತ್ತಿಗೆದಾರರಾದ ಮೆ॥ ನಾಗಾರ್ಜುನ ಕನ್ಸ್‌ಟ್ರಕ್ಷನ್ಸ್ ಲಿ., ರವರಿಗೆ ವಹಿಸಲಾಗಿದ್ದು, 7984.00 ಲಕ್ಷ ರೂ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯನ್ನು ಆಗಸ್ಟ್ 2009 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

**5. ಹೊರವರ್ತುಲ ರಸ್ತೆಯಲ್ಲಿ ಅಗರ ಮತ್ತು ಇಬ್ಲೂರು ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ**

ಅಗರ ಮತ್ತು ಇಬ್ಲೂರು ಜಂಕ್ಷನ್‌ಗಳಲ್ಲಿ ಹೊರವರ್ತುಲ ರಸ್ತೆಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸುವ ಕಾಮಗಾರಿಯನ್ನು JnNURM ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು 9400 ಲಕ್ಷ ರೂ. ಮೊತ್ತದಲ್ಲಿ ಮೆ॥ ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಕಂಪನಿ ರವರಿಗೆ ವಹಿಸಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಏಪ್ರಿಲ್ 2010 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

**6. ಹೊರವರ್ತುಲ ರಸ್ತೆಯಲ್ಲಿ ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳ ಮೇಲ್ಸೇತುವೆವರೆಗೆ 8 ಜಂಕ್ಷನ್‌ಗಳ ಅಭಿವೃದ್ಧಿ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರವಲಯ ವರ್ತುಲ ರಸ್ತೆಯಲ್ಲಿ ಮುಖ್ಯ ರಸ್ತೆಗಳು ಸಂಧಿಸುವಲ್ಲಿ ವಾಹನ ಸಂಚಾರವನ್ನು ಸುಗಮಗೊಳಿಸಲು ಒಟ್ಟು 8 ಜಂಕ್ಷನ್‌ಗಳಲ್ಲಿ ಸುಮಾರು **30950 ಲಕ್ಷ ರೂ.** ವೆಚ್ಚದಲ್ಲಿ ಕೆಳಸೇತುವೆ / ಮೇಲುಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು ಟೆಂಡರನ್ನು ಅಹ್ವಾನಿಸಲಾಗಿದೆ, ಜೂನ್ 2010ರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

**7. ಹೊರವರ್ತುಲ ರಸ್ತೆಯ ಸರ್ವೀಸ್ ರಸ್ತೆಗಳ ಅಭಿವೃದ್ಧಿ**

ಹೊರವರ್ತುಲ ರಸ್ತೆಯ ಸರ್ವೀಸ್ ರಸ್ತೆಯ ಭಾಗಗಳನ್ನು **2830.00 ಲಕ್ಷ ರೂ** ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

**8. ಪೆರಿಫೆರಲ್ ರಿಂಗ್ ರಸ್ತೆ**

ಪೆರಿಫರಲ್ ರಿಂಗ್ ರಸ್ತೆಯು 116.00 ಕಿ.ಮೀ. ಉದ್ದವಿದ್ದು, ಈ ಕಾಮಗಾರಿಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.

**ಪ್ರಥಮ ಹಂತ:** ತುಮಕೂರು ರಸ್ತೆ (ರಾಹೆ–4) ಯಿಂದ ಬಳ್ಳಾರಿ ರಸ್ತೆ (ರಾಹೆ–7), ಹಳೇ ಮದ್ರಾಸ್ ರಸ್ತೆ (ರಾಹೆ–4), ವರ್ತೂರು ರಸ್ತೆ, ಸರ್ಜಾಪುರ ರಸ್ತೆಯನ್ನು ಹಾದು ಹೊಸೂರು ರಸ್ತೆ (ರಾಹೆ–7) ಯವರೆಗೆ – **65 ಕಿ.ಮೀ : ವೆಚ್ಚ ರೂ.3000 ಕೋಟಿ.** (ಭೂಸ್ವಾಧೀನ ಸೇರಿದಂತೆ)

ಈ ರಸ್ತೆಯನ್ನು ನಿರ್ಮಾಣ, ನಿರ್ವಹಣೆ ಮತ್ತು ಹಸ್ತಾಂತರ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಜಾಗತಿಕ ಟೆಂಡರನ್ನು ಅಹ್ವಾನಿಸಲು ಉದ್ದೇಶಿಸಿಲಾಗಿದೆ. ಪ್ರಸ್ತುತದಲ್ಲಿ ಪ್ರಥಮ ಹಂತದ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಿದ್ದು, ಪೂರ್ವಾರ್ಹತೆಗಾಗಿ ಅರ್ಹ ಏಜೆನ್ಸಿಗಳಿಂದ ಅರ್ಜಿ ಪಡೆಯಲು ದಿ:26/02/2009 ರಂದು ಜಾಗತಿಕ ಟೆಂಡರ್ ನೋಟಿಫಿಕೇಷನ್ ಹೊರಡಿಸಲಾಗಿರುತ್ತದೆ.

**ದ್ವಿತೀಯ ಹಂತ:** ತುಮಕೂರು ರಸ್ತೆ (ರಾಹೆ–4) ಯಿಂದ ಮಾಗಡಿ ರಸ್ತೆ (ರಾಜ್ಯ ಹೆದ್ದಾರಿ), ಮೈಸೂರು ರಸ್ತೆ (ರಾಜ್ಯ ಹೆದ್ದಾರಿ – 17), ಬನ್ನೇರುಘಟ್ಟ ರಸ್ತೆ (ರಾಜ್ಯ ಹೆದ್ದಾರಿ), ಕನಕಪುರ ರಸ್ತೆ (ರಾಹೆ–209) ಯನ್ನು ಹಾದು ಹೊಸೂರು ರಸ್ತೆ (ರಾಹೆ–7) ಯವರೆವಿಗೆ – 51 ಕಿ.ಮೀ. ವೆಚ್ಚ : ರೂ.2000 ಕೋಟಿ. (ಭೂಸ್ವಾಧೀನ ಸೇರಿದಂತೆ)

ಈ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಮೆ॥ ಸ್ಟುಪ್ ಕನ್ಸಲ್‌ಟೆಂಟ್ಸ್ ರವರನ್ನು 510.00 ಲಕ್ಷ ರೂಗಳ ಟೆಂಡರು ಮೊತ್ತದಲ್ಲಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್‌ನ್ನೊಳಗೊಂಡಂತೆ ಸಲಹೆಗಾರರಾಗಿ ನೇಮಿಸಲಾಗಿದೆ. ಯೋಜನಾ ವರದಿಯನ್ನು ತಯಾರಿಸಲಾಗಿದೆ.

## 9. ಹೊಸ ಬಡಾವಣೆಗಳ ರಚನೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜಮೀನಿನ ಮಾಲೀಕರ ಜಂಟಿ ಸಹಭಾಗಿತ್ವದೊಂದಿಗೆ 5 ಹೊಸ ಬಡಾವಣೆಗಳನ್ನು ರಚಿಸಲು ಉದ್ದೇಶಿಸಿದೆ. ಈ ಯೋಜನೆಯಲ್ಲಿ ಜಮೀನಿನ ಮಾಲೀಕರಿಗೆ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿನ ಭಾಗವನ್ನು ಜಮೀನಿಗೆ ಬದಲಾಗಿ ಪರಿಹಾರವಾಗಿ ನೀಡಲು ಯೋಜಿಸಲಾಗಿದೆ. ಉದ್ದೇಶಿಸಿರುವ 5 ಬಡಾವಣೆಗಳಲ್ಲಿ ಒಟ್ಟಾರೆ ವಿವಿಧ ಅಳತೆಯ ಸುಮಾರು 1,60,000 ನಿವೇಶನಳನ್ನು ರಚಿಸಲು ಉದ್ದೇಶಿಸಿದೆ. 5 ಬಡಾವಣೆಗಳು ಕೆಳಕಂಡಂತಿರುತ್ತವೆ.

1. ನಾಡಪ್ರಭು ಕೆಂಪೇಗೌಡ ಬಡಾವಣೆ.
2. ಡಾ॥ ಶಿವರಾಮಕಾರಂತ್ ಬಡಾವಣೆ.
3. ಶ್ರೀ ಡಿ. ದೇವರಾಜ ಅರಸ್ ಬಡಾವಣೆ.
4. ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ.
5. ಶ್ರೀ. ಕೆ.ಸಿ. ರೆಡ್ಡಿ ಬಡಾವಣೆ.

ಮೇಲ್ಕಂಡ ಐದು ಬಡಾವಣೆಗಳಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ರಚಿಸಲು ಕರ್ನಾಟಕ ಸರ್ಕಾರವು ದಿನಾಂಕ 02-04-2008 ರಂದು ಅನುಮೋದನೆ ನೀಡಿದ್ದು ಈ ಬಡಾವಣೆಯನ್ನು ರಚಿಸಲು 4814 ಎಕರೆ 15 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ 21-05-2008 ರಂದು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯಾದ ನಂತರ ಜಮೀನನ್ನು ಸ್ವಾಧೀನಪಡೆದುಕೊಂಡು ಬಡಾವಣೆಯನ್ನು ರಚಿಸಲು ಪ್ರಾರಂಭಿಸಲಾಗುವುದು. ಇದಲ್ಲದೇ ದಿನಾಂಕ 03-11-2008 ರಂದು ಡಾ॥ ಶಿವರಾಮ ಕಾರಂತ್ ಬಡಾವಣೆಯನ್ನು ರಚಿಸಲು ಕರ್ನಾಟಕ ಸರ್ಕಾರವು ಅನುಮೋದನೆಯನ್ನು ನೀಡಿದ್ದು 3546 ಎಕರೆ 12 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಉಳಿದ 3 ಬಡಾವಣೆಗೆ ಸರ್ಕಾರವು ದಿನಾಂಕ 28-2-09 ರಂದು ಮಂಜೂರಾತಿ ನೀಡಿದ್ದು, ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ನೀಡಬೇಕಾಗಿದೆ.

## 10. ಈಗಾಗಲೇ ನಿರ್ಮಾಣವಾಗಿರುವ ಬಡಾವಣೆಗಳ ಅಭಿವೃದ್ಧಿ ಕೆಲಸ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಅಂಜನಾಪುರ, ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ಬನಶಂಕರಿ 6ನೇ ಹಂತ ಹಾಗೂ ಅರ್ಕಾವತಿ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದೆ. ಈ ಬಡಾವಣೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಒಟ್ಟಾರೆ 95 ಕೆಲಸಗಳನ್ನು ರೂ.117.17 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಆದರೆ ನ್ಯಾಯಾಲಯದಲ್ಲಿ ಹೂಡಿದ್ದ ದಾವೆಗಳಿಂದಾಗಿ ಅರ್ಕಾವತಿ ಬಡಾವಣೆಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. ಬನಶಂಕರಿ 2ನೇ ಹಂತ ಹಾಗೂ ಹೆಚ್.ಎಸ್.ಆರ್. ಬಡಾವಣೆಯಲ್ಲಿರುವ ವಾಣಿಜ್ಯ ಸಂಕೀರ್ಣದ 2ನೇ ಮಹಡಿಯನ್ನು ನಿರ್ಮಿಸಲು ಕೆಲಸವನ್ನು ಪ್ರಾರಂಭಿಸಲಾಗಿದೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿದೆ.

**11. ಆರ್ಥಿಕ ದುರ್ಬಲ ವರ್ಗದವರಿಗಾಗಿ ಗೃಹ ನಿರ್ಮಾಣ**

ಕರ್ನಾಟಕ ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 326 ಎಕರೆ 19 ಗುಂಟೆ ಜಮೀನನ್ನು ಆರ್ಥಿಕ ದುರ್ಬಲ ವರ್ಗದವರಿಗಾಗಿ ಗೃಹ ನಿರ್ಮಾಣ ಯೋಜನೆ ರೂಪಿಸಲು ಮಂಜೂರು ಮಾಡಿರುತ್ತದೆ. ಇದರಲ್ಲಿ 45 ಎಕರೆ ಜಮೀನು ವಸತಿ ವಲಯದಲ್ಲಿದ್ದು, ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆ ಕೈಗೊಳ್ಳಲು ಅರ್ಹ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿತ್ತು. ದಿನಾಂಕ 17-02-2009 ರಂದು ಪ್ರಸ್ತಾವನೆಯನ್ನು ಸ್ವೀಕರಿಸಲು ಕಡೆಯ ದಿನಾಂಕವಾಗಿದ್ದು, ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಇದಲ್ಲದೆ JnNURM ನೆರವಿನೊಂದಿಗೆ ಆರ್ಥಿಕ ದುರ್ಬಲ ವರ್ಗದವರಿಗಾಗಿ ಗೃಹ ನಿರ್ಮಾಣ ಯೋಜನೆಯನ್ನು BSUP ಅಡಿಯಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಇದು ಸಹ ಮಂಜೂರಾಗಿರುವುದಿಲ್ಲ. ಆರ್ಥಿಕ ದುರ್ಬಲ ವರ್ಗದವರಿಗಾಗಿ ಗೃಹ ನಿರ್ಮಾಣ ಯೋಜನೆಗಾಗಿ ಪ್ರಸಕ್ತ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯವ್ಯಯದಲ್ಲಿ ರೂ.90.00 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ.

**12. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ವಿವರಗಳು:**

ಕರ್ನಾಟಕ ಸರ್ಕಾರವು ಹಳೆಯ ನಗರಸಭೆ / ಪುರಸಭೆಯ ವ್ಯಾಪ್ತಿಯಲ್ಲಿ ಸೌಲಭ್ಯ ಉನ್ನತೀಕರಣಕ್ಕಾಗಿ ರೂ.623.09 ಕೋಟಿಗಳ ವೆಚ್ಚದಲ್ಲಿ 1554 ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿರುತ್ತದೆ. 2008-09ನೇ ಸಾಲಿನಲ್ಲಿ 695 ಕಾಮಗಾರಿಗಳನ್ನು ರೂ.294.15 ಕೋಟಿಗಳ ವೆಚ್ಚದಲ್ಲಿ ಪ್ರಾರಂಭಿಸಲು ಕಾರ್ಯಾದೇಶವನ್ನು ನೀಡಲಾಗಿದೆ. 2009-10ನೇ ಸಾಲಿನಲ್ಲಿ 645 ಕಾಮಗಾರಿಗಳನ್ನು ರೂ.270.10 ಕೋಟಿಗಳ ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ. 9 ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರು ಕೋರಿರುವಂತೆ 193 ಕಾಮಗಾರಿಗಳಿಗೆ ಬದಲಾಗಿ 112 ಪರ್ಯಾಯ ಕಾಮಗಾರಿಗಳನ್ನು ರೂ.67.56 ಕೋಟಿಗಳ ವೆಚ್ಚದಲ್ಲಿ ತೆಗೆದುಕೊಳ್ಳಲು ಸರ್ಕಾರದ ಆದೇಶ ಕೋರಲಾಗಿದೆ.

## 7. ನಗರ ಯೋಜನಾ ವಿಭಾಗ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ಬೆಂಗಳೂರು ಮತ್ತು ಅದರ ಪರಿಸರವನ್ನೊಳಗೊಂಡಂತೆ 1219.5 ಚ.ಕಿ.ಮೀ. ವಿಸ್ತೀರ್ಣ ಘೋಷಿಸಿರುವ ಸ್ಥಳೀಯ ಯೋಜನಾ ಪ್ರದೇಶಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನಾ ಪ್ರಾಧಿಕಾರವಾಗಿರುತ್ತದೆ. ನಗರ ಯೋಜನಾ ವಿಭಾಗವು ಪ್ರಾಧಿಕಾರದ ಯೋಜನಾ ಚಟುವಟಿಕೆಗಳನ್ನು ನೋಡಿಕೊಳ್ಳುತ್ತದೆ.

ಈ ವಿಭಾಗದ ಮುಖ್ಯ ಚಟುವಟಿಕೆಗಳು ಈ ಕೆಳಕಂಡಂತಿರುತ್ತವೆ.

ಅ. ಬೆಂಗಳೂರು ಮಾಸ್ಟರ್ ಪ್ಲಾನ್ ತಯಾರಿಕೆ : ಪರಿಷ್ಕರಣೆ ಮತ್ತು ಅದರ ಅನುಷ್ಠಾನಗೊಳಿಸುವಿಕೆ.

ಆ. ಖಾಸಗಿಯವರ ಬಡಾವಣೆ ನಕ್ಷೆ : ಅಭಿವೃದ್ಧಿ ಯೋಜನೆ : ಸಮೂಹ ವಸತಿ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆ ನೀಡುವುದು.

ಇ. ಭೂ ಉಪಯೋಗ ಬದಲಾವಣೆಯ ಅರ್ಜಿಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(A)ರಡಿಯಲ್ಲಿ ಕ್ರಮ ಜರುಗಿಸುವುದು.
ಈ. ನಿವೇಶನಗಳ ವಿಭಜನೆ : ಸಮಾಮೇಲನಗಳ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು.
ಉ. ಕಟ್ಟಡ ನಕ್ಷೆಗಳ ಮಂಜೂರಾತಿಗಾಗಿ ಅಭಿಯಂತರ ಸದಸ್ಯರಿಂದ ಬರುವ ಕಡತಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು. ಹಾಗೂ ವಿವಿಧ ವಿಭಾಗಗಳಿಗೆ ಬರುವ ಕಡತಗಳಿಗೆ ಯೋಜನಾ ದೃಷ್ಟಿಯಿಂದ ವಲಯ ನಿಯಮಾವಳಿಯಡಿಯಲ್ಲಿ ಅಭಿಪ್ರಾಯ ನೀಡುವುದು.
ಊ. ಪ್ರಾಧಿಕಾರದ ವಿವಿಧ ವಿಭಾಗಗಳಿಗೆ ತಾಂತ್ರಿಕ ನೆರವು ನೀಡುವುದು.
ಋ. ಭೂ ಪರಿವರ್ತನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡುವುದು.

ಪ್ರಸಕ್ತ ಸಾಲಿನಲ್ಲಿ ಖಾಸಗಿ ಅಭಿವೃದ್ಧಿದಾರರ ಪರವಾಗಿ 20 ಸಮೂಹ ವಸತಿ : ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳನ್ನು ಪ್ರಾಧಿಕಾರವು ಅನುಮೋದಿಸಿರುತ್ತದೆ. ಖಾಸಗಿ, ಸಹಕಾರ ಸಂಘ / ವ್ಯಕ್ತಿಗಳ ಪರವಾಗಿ ವಸತಿ ಬಡಾವಣೆ : ತಾತ್ಕಾಲಿಕ ಬಡಾವಣೆ ನಕ್ಷೆ ಅನುಮೋದನೆ ಕೋರಿ 268 ಅರ್ಜಿಗಳು ಬಂದಿದ್ದು, ಇವುಗಳಲ್ಲಿ 16 ಪ್ರಕರಣಗಳಿಗೆ ಕಾರ್ಯಾದೇಶವನ್ನು ನೀಡಲಾಗಿದೆ. ಉಳಿದ ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತವೆ. ಹಾಗೂ ತಾತ್ಕಾಲಿಕ ಬಡಾವಣೆ ನಕ್ಷೆ ಅನುಮೋದನೆಗಾಗಿ ಒಟ್ಟು 85 ಪ್ರಕರಣಗಳಲ್ಲಿ ತಾತ್ಕಾಲಿಕ ಬಡಾವಣೆ ನಕ್ಷೆಯನ್ನು ಅನುಮೋದಿಸಿ ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ. ಉಳಿದ ಪ್ರಕರಣಗಳು ಪರಿಶೀಲನಾ ಹಂತದಲ್ಲಿ ಇರುತ್ತವೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಪರಿಚ್ಛೇದ 14(ಎ) ಪ್ರಕಾರ ಭೂ ಉಪಯೋಗ ಬದಲಾವಣೆಯ ಅರ್ಜಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 5 ಭೂ ಉಪಯೋಗ ಬದಲಾವಣೆಯ ಪ್ರಕರಣಗಳನ್ನು ಸರ್ಕಾರವು ಅನುಮೋದಿಸಿರುತ್ತದೆ. ಹಾಗೂ ಈ 05 ಪ್ರಕರಣಗಳಿಗೂ ಪ್ರಾರಂಭಿಕ ದೃಢೀಕರಣ ಪತ್ರವನ್ನು ನೀಡಲಾಗಿದೆ. ಉಳಿದಂತೆ ಕೆ.ಟಿ.ಸಿ.ಪಿ. ಕಾಯ್ದೆ 1961 ರ ಸೆಕ್ಷನ್ 14-A ಗೆ ಸರ್ಕಾರವು ತಿದ್ದುಪಡಿ ತಂದಿದ್ದು , ಅದರಂತೆ ಕೈಗಾರಿಕಾ ಉಪಯೋಗದಿಂದ ವಸತಿ : ವಾಣಿಜ್ಯ ಉದ್ದೇಶದ 48 ಪ್ರಕರಣಗಳನ್ನು ಹಾಗೂ ಪ್ರಾಧಿಕಾರದ ಮಟ್ಟದಲ್ಲಿ ವಿಶೇಷ ಸಂದರ್ಭದಲ್ಲಿ 06 ಪ್ರಕರಣಗಳನ್ನು ಪರಿಶೀಲಿಸಿ ಪ್ರಾರಂಭಿಕ ದೃಢೀಕರಣ ಪತ್ರ ನೀಡಲಾಗಿದ್ದು , ಒಟ್ಟು 54 ಪ್ರಕರಣಗಳನ್ನು ಪರಿಶೀಲಿಸಿ ಪ್ರಾರಂಭಿಕ ದೃಢೀಕರಣ ಪತ್ರ ನೀಡಲಾಗಿರುತ್ತದೆ.

**ವಿಭಜನೆ :** ಸಮಾಮೇಲನದ 50 ಪ್ರಕರಣಗಳನ್ನು ಪ್ರಸಕ್ತ ಸಾಲಿನಲ್ಲಿ ವಿಲೇವಾರಿ ಮಾಡಲಾಗಿದೆ. ಕಟ್ಟಡ ನಕ್ಷೆ ಮಂಜೂರಾತಿಗಾಗಿ ಅಭಿಯಂತರ ವಿಭಾಗಕ್ಕೆ 110 ಪ್ರಕರಣಗಳಲ್ಲಿ ವಲಯ ನಿಯಾಮವಳಿಯಂತೆ ಅಭಿಪ್ರಾಯ ನೀಡಲಾಗಿದೆ.

## ಪರಿಷ್ಕೃತ ಮಾಸ್ಟರ್ ಪ್ಲಾನ್ – 2015

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961 ಸೆಕ್ಷನ್ 13(D) ರ ಪ್ರಕಾರ ಮಾಸ್ಟರ್ ಪ್ಲಾನ್‌ನ ಪರಿಷ್ಕರಣಾ ಕಾರ್ಯವನ್ನು ಕನಿಷ್ಟ ಹತ್ತು ವರ್ಷಗಳಿಗೊಮ್ಮೆ ಮಾಡಬೇಕಾಗಿರುತ್ತದೆ. ಬೆಂಗಳೂರು ವ್ಯಾಪಕಾಭಿವೃದ್ಧಿ ಯೋಜನೆಯನ್ನು ಪ್ರಥಮವಾಗಿ 1984ರಲ್ಲಿ ಸರ್ಕಾರದಿಂದ ಅನುಮೋದಿಸಲಾಗಿದ್ದು , ನಂತರ ಮೊದಲನೇ ಪರಿಷ್ಕರಣೆಯನ್ನು 1995ರಲ್ಲಿ ಮಾಡಲಾಗಿದೆ. 2005ನೇ ಸಾಲಿಗೆ ತಯಾರಿಸಿದ್ದ , ಈ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಕಾಯ್ದೆಯನ್ವಯ ಎರಡನೇ ಭಾರಿಗೆ 2015ನೇ ಇಸವಿಯ ಯೋಜನಾ ಅವಧಿಗೆ ಪರಿಷ್ಕರಿಸಿ ಸರ್ಕಾರದಿಂದ ದಿನಾಂಕ 25.06.2007ರಂದು ಅಂತಿಮ ಅನುಮೋದನೆ ಪಡೆಯಲಾಗಿದೆ.

ಜನ ಸಾಮಾನ್ಯರಿಗೆ ಅದರಲ್ಲೂ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದಂತಹ ಜನಗಳಿಗೆ ಅನುಕೂಲವಾಗುವಂತೆ ಕೈಗೆಟಕುವ ದರದಲ್ಲಿ ಪ್ರಾಧಿಕಾರದಿಂದ ಮನೆಗಳನ್ನು ನಿರ್ಮಿಸಿ ವಿತರಿಸುವಂತಹ ಯೋಜನೆಗಳನ್ನು ಮಾಸ್ಟರ್ ಪ್ಲಾನ್‌ನಲ್ಲಿ ಸೂಕ್ತವಾಗಿ ಅಳವಡಿಸಲಾಗಿದೆ. ಅದರ ಮುಖ್ಯಾಂಶಗಳು ಈ ಕೆಳಕಂಡಂತೆ ಇವೆ.

i. ನಗರದ ಪೂರ್ವ ಭಾಗದಲ್ಲಿ ಹೊಸೂರು ರಸ್ತೆಯಿಂದ ವರ್ತೂರು ರಸ್ತೆಯ ಮಧ್ಯಭಾಗದಲ್ಲಿ ಬರುವ ಸುಮಾರು 4560 ಎಕರೆ ಜಮೀನನನು ಪ್ರಾಧಿಕಾರದಿಂದ ವಸತಿ ಯೋಜನೆ ಕೈಗೊಳ್ಳಲು ಗುರ್ತಿಸಲಾಗಿದೆ.

ii. ಪ್ರಾಧಿಕಾರದಲ್ಲಿ ಮೊಟ್ಟಮೊದಲಭಾರಿಗೆ ಆರ್ಥಿಕ ಹೊರೆಯಾಗದಂತೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಭೂಮಾಲೀಕರು ಮತ್ತು ಪ್ರಾಧಿಕಾರದ ನಡುವೆ ಅಭಿವೃದ್ಧಿಪಡಿಸಿರುವ ಪ್ರದೇಶಗಳನ್ನು ಶೇ. 40 : 60ರ ಅನುಪಾತದಲ್ಲಿ ಹಂಚಿಕೊಳ್ಳುವ ಆಧಾರದ ಮೇಲೆ ವಿನೂತನ ಪದ್ಧತಿಯನ್ನು ಅನುಸರಿಸಲು ಪ್ರಸ್ತಾಪಿಸಲಾಗಿದೆ.

iii. ನಗರದ ಪೂರ್ವ ಭಾಗದ ಜೊತೆಗೆ ಪಶ್ಚಿಮ ಭಾಗದಲ್ಲಿ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯವರೆಗೆ Budget Housing ಮತ್ತು ನಿವೇಶನಗಳನ್ನು ನಿರ್ಮಿಸುವ ಯೋಜನೆಗೆ ಸುಮಾರು 3890 ಎಕರೆ ಜಮೀನನ್ನು ಗುರ್ತಿಸಲಾಗಿದೆ.

ಮೇಲೆ ಪ್ರಸ್ತಾಪಿಸಿರುವ ಯೊಜನೆಗಳನ್ನು ಅನುಷ್ಟಾನಗೊಳಿಸುವುದರಿಂದ ವಿವಿಧ ಆದಾಯದ ಜನರಿಗೆ ಸುಮಾರು 2,45,384 ಮನೆಗಳನ್ನು ನಿರ್ಮಿಸಬಹುದಾಗಿದ್ದು, ಜೊತೆಗೆ 64,260 ನಿವೇಶನಗಳನ್ನು ರಚಿಸಬಹುದಾಗಿದೆ. ಇದರಲ್ಲಿ ಸುಮಾರು 36,500 ನಿವೇಶನಗಳನ್ನು ಭೂ ಮಾಲೀಕರಿಗೆ ಪರಿಹಾರವಾಗಿ ನೀಡುವುದರಿಂದ, ಅಗತ್ಯ ಭೂಮಿಯನ್ನು ಯಾವುದೇ ಆರ್ಥಿಕ ಹೊರೆ ಇಲ್ಲದೆ ಪ್ರಾಧಿಕಾರವು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.

ಪಶ್ಚಿಮ ಭಾಗದಲ್ಲಿ ವಸತಿ ಯೋಜನೆಯ ಜೊತೆಯ ಉದ್ದೇಶಿತ PRR ಪಂಕ್ತೀಕರಣದ ಇಕ್ಕೆಲಗಳಲ್ಲಿ ಮಾಹಿತಿ ತಂತ್ರಜ್ಞಾನ ಚಟುವಟಿಕೆಗೆ ಸುಮಾರು 1025 ಎಕರೆಯ ಪ್ರದೇಶವನ್ನು ಗುರುತಿಸಿದ್ದು, ಹಿಂದಿನಿಂದಲೂ ಕಡೆಗಣಿಸಲ್ಪಟ್ಟ ಹಾಗೂ ಯಾವುದೇ ಪ್ರಮುಖವಾದ ಆರ್ಥಿಕ ಚಟುವಟಿಕೆ ಇಲ್ಲದಿರುವ ಕೊರತೆಯನ್ನು ನೀಗಿಸುವ ಹಿನ್ನೆಲೆಯಲ್ಲಿ ತಂತ್ರಜ್ಞಾನ ಚಟುವಟಿಕೆಗೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು (Including IT space) ಜಂಟಿ ಸಹಭಾಗಿತ್ವದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಯಿಂದ ಆ ಪ್ರದೇಶದಲ್ಲಿ ಸುಮಾರು ಎರಡು ಲಕ್ಷ ಜನರಿಗೆ ಉದ್ಯೋಗ ಅವಕಾಶ ನಿರ್ಮಾಣವಾಗುವುದರ ಜೊತೆಗೆ ಸುಮಾರು 11.2 ಮಿಲಿಯನ್ ಚದರ ಮೀಟರ್ ವಿಸ್ತೀರ್ಣದ ಪ್ರಥಮ ದರ್ಜೆಯ IT spaceಅನ್ನು ಒದಗಿಸಬಹುದಾಗಿದೆ.

ವಲಯ ನಿಯಮಾವಳಿಗಳನ್ನು ಅತ್ಯಂತ ಸರಳವಾಗಿ ಹಾಗೂ ಪರಿಣಾಮಕಾರಿಯಾಗಿ ರೂಪಿಸಲಾಗಿದ್ದು, ಅದರಲ್ಲಿನ ಮುಖ್ಯಾಂಶಗಳು ಈ ಕೆಳಕಂಡಂತೆ ಇವೆ:

- ವಲಯ ನಿಯಮಗಳು ಅತ್ಯಂತ ಸರಳವಾಗಿದ್ದು, ಮಿಶ್ರ-ಭೂಉಪಯೋಗದ ತತ್ವವನ್ನು ಅಳವಡಿಸಿಕೊಳ್ಳಲಾಗಿದೆ.
- ಬೆಂಗಳೂರಿನಲ್ಲಿ ಹದಗೆಟ್ಟಿರುವ ವಾಹನ ನಿಲುಗಡೆಯ ವ್ಯವಸ್ಥೆಯನ್ನು ಸರಿಪಡಿಸಲು ಸಹಕಾರಿಯಾಗುವಂತೆ Multi Level Car parking (MLCP) ಅವಕಾಶವನ್ನು ಕಲ್ಪಿಸಲಾಗಿದ್ದು, ಈ ನಿರ್ಮಾಣಕ್ಕೆ FARನಲ್ಲಾಗಲೀ ಅಥವಾ ಕಟ್ಟಡದ ಎತ್ತರದಲ್ಲಾಗಲೀ ಯಾವುದೇ ಗರಿಷ್ಟ ಮಿತಿ ಇರುವುದಿಲ್ಲ.
- ವಾಹನ ನಿಲುಗಡೆಗಾಗಿ ಗರಿಷ್ಟ ಐದು Basement Floor ಗಳಿಗೆ ಅವಕಾಶ ಕಲ್ಪಿಸಲಾಗಿದೆ.
- 240 ಚ.ಮೀ ವಿಸ್ತೀರ್ಣಕ್ಕಿಂತ ಹೆಚ್ಚರುವ ವಸತಿ ಕಟ್ಟಡಗಳು ಎಲ್ಲಾ ವಿಧದ ವಸತಿಯೇತರ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿ (RWH) ಕಡ್ಡಾಯಗೊಳಿಸಲಾಗಿದ್ದು, ಇದನ್ನು ಪ್ರೋತ್ಸಾಹಿಸುವ ಸಲುವಾಗಿ ಉತ್ತೇಜಕ ಕ್ರಮವಾಗಿ ವಸತಿ ಕಟ್ಟಡಗಳಿಗೆ ಶೇ. 5 ಹಾಗೂ ವಸತಿಯೇತರ ಕಟ್ಟಡಗಳಿಗೆ ಶೇ. 2ರಷ್ಟು ಆಸ್ತಿ ತೆರಿಗೆಯಲ್ಲಿ ಮೊದಲ ಹತ್ತು ವರ್ಷಗಳ ವರೆಗೆ ವಿನಾಯ್ತಿಯನ್ನು ನೀಡಲು ಪ್ರಸ್ತಾಪಿಲಾಗಿದೆ.
- ಸೌರಶಕ್ತಿಯ (Solar Light) Lighting ಮತ್ತು Heating ವ್ಯವಸ್ಥೆಯನ್ನು ಕಟ್ಟಡದಲ್ಲಿ ಅಳವಡಿಸಿದಲ್ಲಿ ಕಟ್ಟಡ ಅನುಮೋದನೆ ಸಂಬಂಧ ಪಡೆಯುವ ಬಡ್ಡಿರಹಿತ ಭದ್ರತಾ ಠೇವಣಿಯನ್ನು ಹಿಂದಿರುಗಿಸುವಾಗ ಶೇ.2 ರಷ್ಟು ಬಡ್ಡಿದರವನ್ನು ನೀಡಲು ಉದ್ದೇಶಿಸಿದೆ.
- ನಕ್ಷೆಯನ್ನು ಉಲ್ಲಂಘನೆ ಮಾಡದೆ ಕಟ್ಟಡ ಕಾಮಗಾರಿಯನ್ನು ಮುಗಿಸಿದ್ದಂತಹ ಪ್ರಕರಣದಲ್ಲಿ ಯೋಜಿತ ಬೆಳವಣಿಗೆಯನ್ನು ಉತ್ತೇಜಿಸುವ ಹಿನ್ನೆಲೆಯಲ್ಲಿ ಬಡ್ಡಿರಹಿತ **ಭದ್ರತಾ ಠೇವಣಿ** ಮೇಲೆ ಶೇ.2ರಷ್ಟು ಬಡ್ಡಿ ದರವನ್ನು ನೀಡಲು ಉದ್ದೇಶಿಸಿದೆ.

- ವಸತಿ ವಾಣಿಜ್ಯ ಹಾಗೂ ಕೈಗಾರಿಕಾ ಉಪಯೋಗಗಳಿಗೆ ಸಂಬಂಧಿಸಿದಂತೆ ರಸ್ತೆ ಅಗಲ ಮತ್ತು ನಿವೇಶನ ವಿಸ್ತೀರ್ಣಕ್ಕೆ ಅನುಗುಣವಾಗಿ ಗರಿಷ್ಠ 3.25 FAR ಅನ್ನು ಪ್ರಸ್ತಾಪಿಸಲಾಗಿದ್ದು , ಇಷ್ಟು ಪ್ರಮಾಣದ FAR ನೀಡುತ್ತಿರುವ ಮೊಟ್ಟಮೊದಲ ನಗರ ಬೆಂಗಳೂರು ಆಗಿರುತ್ತದೆ. ಈ ಕ್ರಮವು ಹೆಚ್ಚಿನ ಮಟ್ಟದ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಬಂಡವಾಳವನ್ನು ಸಹ ಆಕರ್ಷಿಸುತ್ತದೆ.

**ಇತರೆ ಚಟುವಟಿಕೆಗಳು:**

ಸರ್ಕಾರವು ತನ್ನ ಆದೇಶ ಸಂಖ್ಯೆ ವನಇ 98 ಟಿಟಿಪಿ 80, ದಿನಾಂಕ 26.08.1980ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಮಾನ ನಿಲ್ದಾಣ ಪರಿಸರಣಾ ನಿರ್ವಹಣೆಯ ಸಮಿತಿಯನ್ನು ರಚಿಸಿದೆ. ಈ ಸಮಿತಿಗೆ ಪ್ರಾಧಿಕಾರದ ನಗರ ಯೋಜನಾ ಸದಸ್ಯರು, ಕಾರ್ಯದರ್ಶಿಯಾಗಿರುತ್ತಾರೆ. ಈ ಸಂಬಂಧ ದಿನಾಂಕ 03.12.2008ರಂದು ಸಭೆ ನಡೆದಿರುತ್ತದೆ.

## 8. ಭೂಸ್ವಾಧೀನ ವಿಭಾಗ

(ಅ) ಪ್ರಾಧಿಕಾರದ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಒಟ್ಟು ವಿಸ್ತೀರ್ಣ:

ಪ್ರಸಕ್ತ ಅವಧಿಯಲ್ಲಿ 8 ಎಕರೆ 25 ಗುಂಟೆ ಜಮೀನನ್ನು ಪ್ರಾಧಿಕಾರವು ವಸತಿ ಬಡಾವಣೆಗಳ ನಿರ್ಮಾಣಕ್ಕಾಗಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಸ್ವಾಧೀನಪಡಿಸಿಕೊಂಡಿರುತ್ತದೆ. ಫೆರಿಫರಲ್ ರಿಂಗ್ ರಸ್ತೆ ಭಾಗ–1ರ ಯೋಜನೆಗೆ ಅಂತಿಮ ಅಧಿಸೂಚನೆ ಹೊರಡಿಸಿರುವ ಜಮೀನುಗಳ ಪೈಕಿ 254 ಎಕರೆ 34 ಗುಂಟೆ ಜಮೀನಿಗೆ ಐತೀರ್ಪು ಅನುಮೋದಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

(ಆ) ಪ್ರಸಕ್ತ ಸಾಲಿನಲ್ಲಿ ಪ್ರಾಧಿಕಾರವು ಈ ಕೆಳಕಂಡ ಯೋಜನೆಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುತ್ತದೆ.

| **ಕ್ರಮ ಸಂಖ್ಯೆ** | **ಯೋಜನೆಯ ವಿವರಗಳು** | **ಪ್ರಾಧಿಕಾರದ ಠರಾವು ಸಂಖ್ಯೆ ಮತ್ತು ದಿನಾಂಕ** | **ವಿಸ್ತೀರ್ಣ ಎಕರೆ – ಗುಂಟೆ** |
|---|---|---|---|
| 01 | ನಾಡಪ್ರಭು ಕೆಂಪೇಗೌಡ ಬಡಾವಣೆ | ಬಿಡಿಎ:ಕಮಿಷನರ್:ಡಿಸಿ(ಎಲ್ಎ)ಎಲ್ಎಓ:158: 08–09 ದಿನಾಂಕ 21.05.2008 | 4814 – 15 |
| 02 | ಡಾ॥ ಕೆ.ಶಿವರಾಮಕಾರಂತ ಬಡಾವಣೆ | ಬಿಡಿಎ:ಕಮಿಷನರ್:ಡಿಸಿ(ಎಲ್ಎ)ಎಲ್ಎಓ:283: 08–09 ದಿನಾಂಕ 30.12.2008 | 3546 – 12 |

(ಈ) ಮರು ಮಂಜೂರಾತಿ ಪ್ರಕರಣಗಳು:

ಪ್ರಸ್ತಕ ವರ್ಷದಲ್ಲಿ ಮರು ಮಂಜೂರಾತಿ ಪ್ರದೇಶದಲ್ಲಿ ಒಟ್ಟು 212 ಕ್ರಯಪತ್ರಗಳನ್ನು ನೀಡಲಾಗಿದೆ ಹಾಗೂ 115 ಹೊಸ ಮರು ಮಂಜೂರಾತಿ ಪ್ರಕರಣಗಳನ್ನು ಅನುಮೋದಿಸಲಾಗಿದೆ ಮತ್ತು ಇದರಿಂದ ರೂ 21,63,362/- ಗಳನ್ನು ಮರುಮಂಜೂರಾತಿ ಶುಲ್ಕವಾಗಿ ಪಾವತಿಸಿಕೊಳ್ಳಲಾಗಿದೆ.

## 9. ಆರ್ಥಿಕ ವಿಭಾಗ

ಪ್ರಾಧಿಕಾರದ ಬಂಡವಾಳ ಆದಾಯವು ವಸತಿ ನಿವೇಶನಗಳ ಹಂಚಿಕೆ ಹಾಗೂ ವಾಸದ ಮೂಲೆ/ ಬಿಡಿ ನಿವೇಶನ ಮತ್ತು ಅಂಗಡಿ ನಿವೇಶನಗಳ ಹರಾಜು, ಮನೆಗಳು / ಫ್ಲ್ಯಾಟ್ಸ್‌ಗಳು ಮತ್ತು ಕಟ್ಟಡಗಳ ಮಾರಾಟಗಳನ್ನೊಳಗೊಂಡಿರುತ್ತದೆ. ರಾಜಸ್ವ ಆದಾಯವು ಆಸ್ತಿ ತೆರಿಗೆ ಸಂಕೀರ್ಣಗಳ ಬಾಡಿಗೆ ಮತ್ತು ಇತರೆ ಆದಾಯಗಳನ್ನೊಳಗೊಂಡಿರುತ್ತದೆ.

**1.4.2008** ರಿಂದ **31.03.2009**ರವರೆಗೆ ಒಟ್ಟು ಆದಾಯ ಮತ್ತು ವೆಚ್ಚಗಳ ವಿವರ ಈ ಕೆಳಕಂಡಂತಿರುತ್ತದೆ.

### 2008-09ನೇ ಸಾಲಿನ ಸ್ವೀಕೃತಿ ಮತ್ತು ಪಾವತಿಗಳು

| **ಆದಾಯ** | **(ಲಕ್ಷ ರೂಗಳಲ್ಲಿ)** |
|---|---|
| ಬಂಡವಾಳ | 19552.43 |
| ರಾಜಸ್ವ | 19635.02 |
| ಸಾಲಗಳು ಮತ್ತು ಮುಂಗಡಗಳು | 193.06 |
| ಠೇವಣೆಗಳು | 10886.38 |
| **ಒಟ್ಟು** | **50266.89** |
| **ವೆಚ್ಚಗಳು** | **(ಲಕ್ಷ ರೂಗಳಲ್ಲಿ)** |
| ಬಂಡವಾಳ | 32758.70 |
| ರಾಜಸ್ವ | 6169.87 |
| ಸಾಲಗಳು ಮತ್ತು ಮುಂಗಡಗಳು | 2806.78 |
| ಠೇವಣೆಗಳು | 4983.21 |
| **ಒಟ್ಟು** | **46718.56** |

## 10. ವಿಶೇಷ ಜಾರಿದಳ

ಪ್ರಾಧಿಕಾರದ ಸ್ವತ್ತಿನಲ್ಲಿ ಕಂಡುಬರುವ ಒತ್ತುವರಿಯನ್ನು ಹಾಗೂ ಅನಧಿಕೃತ ಅತಿಕ್ರಮಣಗಳ ತೆರವುಗೊಳಿಸಿ ಈ ಸ್ವತ್ತುಗಳನನ್ನು ಸಂರಕ್ಷಿಸುವ ಕಾರ್ಯವು ಈ ವಿಭಾಗದ ಆದ್ಯ ಕರ್ತವ್ಯವಾಗಿರುತ್ತದೆ.

ಇದಲ್ಲದೆ, ಪ್ರಾಧಿಕಾರದ ಆಯಾಯಾ ವಿಭಾಗದ ಕಾರ್ಯಪಾಲಕ ಅಭಿಯಂತರರೊಡಗೂಡಿ ಈ ಕೆಳಕಂಡ ಕಾರ್ಯಗಳನ್ನು ದೂರುಗಳ ಆಧಾರದ ಮೇಲೆ ಹಾಗೂ ಸ್ವಯಂಪ್ರೇರಿತವಾಗಿ ಕೈಗೊಳ್ಳಲಾಗುತ್ತದೆ.

(1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಬಂಧನೆಗಳನ್ನು ಉಲ್ಲಂಘಿಸಿ ಕಾನೂನು ಬಾಹಿರ ಭೂಉಪಯೋಗದಲ್ಲಿನ ಬದಲಾವಣೆ ಮತ್ತು ಕಟ್ಟಡಗಳನ್ನು ಗುರುತಿಸುವುದು.

(2) ಪ್ರಾಧಿಕಾರದ ಜಮೀನು ಮತ್ತು ಸ್ವತ್ತಿನಲ್ಲಿ ಅತಿಕ್ರಮ ಪ್ರಕರಣಗಳನ್ನು ಗುರುತಿಸುವುದು ಮತ್ತು ನೆಲಸಮಗೊಳಿಸುವ ಕಾರ್ಯಕೈಗೊಳ್ಳುವುದು.

(3) ಹಸಿರು ಪಟ್ಟಿ ಪ್ರದೇಶದ ರಕ್ಷಣೆ ಕ್ರಮಗಳನ್ನು ಕೈಗೊಳ್ಳುವುದು.

(4) ಅನಧಿಕೃತ ಬಡಾವಣೆಗಳ ರಚನೆಗಳನ್ನು ತಡೆಗಟ್ಟುವುದು. ಜೊತೆಗೆ ಪ್ರಾಧಿಕಾರದ ಆಡಳಿತಾಧಿಕಾರಿಯಾಗಿರುವ ಮಾನ್ಯ ಆಯುಕ್ತರು ವಿಚಾರಣೆ:ತನಿಖೆ ಮಾಡಲು ನಿರ್ದೇಶಿಸುವ ಕರ್ತವ್ಯಗಳನ್ನು ನಿರ್ವಹಿಸಿ ವರದಿಗಳನ್ನು ನೀಡುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವಾಧೀನಕ್ಕೆ ಒಳಪಟ್ಟಿರುವ ಜಮೀನಿನಲ್ಲಿ ಒಟ್ಟು 49 ಪ್ರಕರಣಗಳಲ್ಲಿ ವಿಶೇಷ ಕಾರ್ಯನಿರತ ಪಡೆಯು ಅನಧಿಕೃತ ನಿರ್ಮಾಣಗಳನ್ನು ನೆಲಸಮ / ಸಂರಕ್ಷಣೆ ಮಾಡಿರುತ್ತದೆ. ಇದರ ಜೊತೆಗೆ ಈ ಅವಧಿಯಲ್ಲಿ ಸುಮಾರು 503.38 ಕೋಟಿ ರೂಗಳ ಮೌಲ್ಯದ 54 ಎಕರೆ ಜಮೀನುಗಳನ್ನು ಭೂ ಕಬಳಿಕೆಯಿಂದ ಸಂರಕ್ಷಿಸಲಾಗಿದೆ.

## 11. ಕಾನೂನು ವಿಭಾಗ

ವಿವಿಧ ನ್ಯಾಯಾಲಯಗಳಲ್ಲಿ ಬಾಕಿರುವ ಮೊಕದ್ದಮೆ ವಿವರಗಳ ಪಟ್ಟಿಯನ್ನು ಅನುಬಂಧ **'ಇ'** ನಲ್ಲಿ ನೀಡಿದೆ. ಒಟ್ಟು 4778 ಪ್ರಕರಣಗಳು ವಿಲೆಗಾಗಿ ಬಾಕಿ ಇರುತ್ತವೆ.

## 12. ಸಾರ್ವಜನಿಕ ಸಂಪರ್ಕ ವಿಭಾಗ

ಸಾರ್ವಜನಿಕ ಸಂಪರ್ಕ ವಿಭಾಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಮಾಹಿತಿ ಕೌಂಟರ್
ಏಕಗವಾಕ್ಷಿ ಏಜೆನ್ಸಿ
ವೃತ್ತ ಪತ್ರಿಕೆ ಮತ್ತು ಪ್ರಕಾಶನ

ಮಾಹಿತಿ ಕೌಂಟರ್‌ನಿಂದ ಪ್ರಾಧಿಕಾರದಲ್ಲಿನ ವಿವಿಧ ಕಾರ್ಯ ವಿಧಾನಗಳ ಮಾಹಿತಿಗಳನ್ನು ಪ್ರಸಾರ ಮಾಡಲಾಗುವುದು. ಇದಲ್ಲದೇ ಗುತ್ತಿಗೆ ಕರಾರು ಪತ್ರ, ಕ್ರಯಪತ್ರ, ನಿವೇಶನಗಳ ವರ್ಗಾವಣೆ ಇತ್ಯಾದಿ ವಿಷಯಗಳ ಬಗ್ಗೆ ಹಂಚಿಕೆದಾರರು ಅನುಸರಿಸಬೇಕಾದ ವಿವಿಧ ಕಾರ್ಯ ವಿಧಾನಗಳ ಮಾರ್ಗದರ್ಶನವನ್ನು ಪ್ರಾಧಿಕಾರವು ಪ್ರಕಟಿಸುತ್ತದೆ.

ವಿವಿಧ ಉದ್ದೇಶಗಳಿಗಾಗಿ ಸಾರ್ವಜನಿಕರಿಂದ ಅರ್ಜಿಗಳನ್ನು ಏಕ ಗವಾಕ್ಷಿಯಲ್ಲಿ ಸ್ವೀಕರಿಸಿ, ಸ್ವೀಕೃತಿ ಪತ್ರ ನೀಡಿದ ನಂತರ ಮುಂದಿನ ಕ್ರಮಕ್ಕಾಗಿ ವಿವಿಧ ವಿಭಾಗಗಳಿಗೆ ರವಾನಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತೆಗೆದುಕೊಳ್ಳಬಹುದಾದ ಕಾಲವನ್ನು ಅಂದರೆ ಅರ್ಜಿಯ ಪರಿಶೀಲನೆ ಮತ್ತು ಅಂತಿಮ ತೀರ್ಮಾನದ ಬಗ್ಗೆ ಅರ್ಜಿದಾರರಿಗೆ ತಿಳಿಸಲಾಗುತ್ತದೆ. ಈ ಅವಧಿಯಲ್ಲಿ **22,917** ಅರ್ಜಿಗಳನ್ನು ಸ್ವೀಕರಿಸಿ ವಿವಿಧ ವಿಭಾಗಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಇ-ಮೇಲ್ ಮುಖಾಂತರವು ಸಹ ಸಾರ್ವಜನಿಕರಿಂದ ಬರುವ ದೂರುಗಳ ಪ್ರಶ್ನೆಗಳನ್ನು ದಾಖಲಿಸುವ ಉತ್ತರಿಸುವ ವ್ಯವಸ್ಥೆ ಇದೆ. ಈ ರೀತಿ ಸ್ವೀಕರಿಸುವ ಎಲ್ಲಾ ದೂರುಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ರವಾನಿಸಿ, ನಿಗಧಿಪಡಿಸಿದ ಅವಧಿಯೊಳಗೆ ಅವರು ಸೂಕ್ತ ಕ್ರಮವನ್ನು ಕೈಗೊಂಡು ಉತ್ತರವನ್ನು ದೂರವಾಣಿಯ ಹಾಗೂ ಇ-ಮೇಲ್ ಮೂಲಕ ಕಳುಹಿಸಲಾಗುವುದು. **1,510** ಇ-ಮೇಲ್ ಮುಖಾಂತರ ಉತ್ತರಗಳನ್ನು ನೀಡಲಾಗಿದೆ.

ಬಿಡಿಎ ವೆಬ್‌ಸೈಟ್ ಪ್ರಾಧಿಕಾರದ ಕಾರ್ಯ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡುವುದಲ್ಲದೇ, ದಿನಂಪ್ರತಿ ಮಾಹಿತಿ ನೀಡಿ ಸಮಯೋಚಿತ ಉತ್ತಮ ಸೌಕರ್ಯ ನೀಡುವಲ್ಲಿ ನೆರವಾಗಿದೆ.

ಈ ಮೇಲಿನ ಜೊತೆಗೆ ಸಾರ್ವಜನಿಕ ಸಂಪರ್ಕ ವಿಭಾಗವು ಪತ್ರಿಕಾ ಮಾಧ್ಯಮಕ್ಕೆ ಸಂಬಂಧಿಸಿದ ವಿಷಯವನ್ನು ಸದಾ ನಿರ್ವಹಿಸುತ್ತಿದೆ. ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪತ್ರಿಕಾ ವರದಿ, ಜಾಹೀರಾತು ನೀಡುವುದು ಹಾಗೂ ವೃತ್ತ ಪತ್ರಿಕೆಗಳಲ್ಲಿ ಬರುವ ಪತ್ರಿಕಾ ವರದಿಗಳಿಗೆ ಪ್ರತ್ಯುತ್ತರ ಮತ್ತು ಸ್ಪಷ್ಟೀಕರಣ ನೀಡಿಕೆ ಇವುಗಳು ಸೇರಿರುತ್ತವೆ. ಈ ಅವಧಿಯಲ್ಲಿ **80** ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗಿದೆ. **8** ಅನುಸರಣಾ ಉತ್ತರಗಳನ್ನು ವಿವಿಧ ಪತ್ರಿಕೆಗಳಿಗೆ ನೀಡಿದೆ.

ಮಾಹಿತಿ ಹಕ್ಕು 2005 ಅಧಿನಿಯಮದಡಿಯಲ್ಲಿ ಒಟ್ಟು **6,989** ಅರ್ಜಿಗಳನ್ನು ಸ್ವೀಕರಿಸಿ, ಸಂಬಂಧಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ತುರ್ತು ಕ್ರಮ ತೆಗೆದುಕೊಳ್ಳಲು ಕೋರಿ ರವಾನಿಸಲಾಗಿದೆ.

## 13. ಎಸ್ಟೇಟ್ ವಿಭಾಗ

ಎಸ್ಟೇಟ್ ವಿಭಾಗವನ್ನು ಮಾನ್ಯ ಎ.ಟಿ.ರಾಮಸ್ವಾಮಿರವರ ಅಧ್ಯಕ್ಷತೆಯ ಜಂಟಿ ಸದನ ಸಮಿತಿಯ ಶಿಫಾರಸ್ಸಿನನ್ವಯ ನವೆಂಬರ್ 2007ರ ಅವಧಿಯಲ್ಲಿ ಪ್ರಾರಂಭಿಸಲಾಗಿದೆ.

ಎಸ್ಟೇಟ್ ಅಧಿಕಾರಿಯವರು 5 ಸಿ.ಎ. ನಿವೇಶನಗಳ ತನಿಖೆಯನ್ನು, 9 ಇತರೆ ಪ್ರಾಧಿಕಾರದ ಸ್ವತ್ತುಗಳ ಸ್ಥಳ ತನಿಖೆಯನ್ನು ಹಾಗೂ ಸುಮಾರು 32 ವಿವಿಧ ಅಳತೆಯ ಸ್ವತ್ತುಗಳನ್ನು ಅತಿಕ್ರಮಣಕಾರರಿಂದ ಸ್ವಾಧೀನಪಡೆದು ಪ್ರಾಧಿಕಾರಕ್ಕೆ ಸುಮಾರು **32** ಕೋಟಿಗಳ ವರಮಾನವನ್ನು ಸಂಗ್ರಹಿಸುವಲ್ಲಿ ಯಶ್ವಸಿಯಾಗಿರುತ್ತಾರೆ. ಸ್ವತ್ತುಗಳ ಅನಧಿಕೃತ ಅತಿಕ್ರಮಣಗಳನ್ನು ತೆರವು ಮಾಡಿಸುವಲ್ಲಿ ಎಸ್.ಪಿ. ಟಾಸ್ಕ್ ಫೋರ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಸಂಪೂರ್ಣ ಸಹಕಾರವನ್ನು ಪಡೆಯಲಾಗಿದೆ. ಮೇಲ್ಕಂಡಂತೆ ಅಗತ್ಯ ಮಾಹಿತಿ ಸಂಗ್ರಹಿಸಿದ ನಂತರ ಎಸ್ಟೇಟ್ ವಿಭಾಗವು ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸಲು ಅವಕಾಶವಾಗುತ್ತದೆ.

## 14. ಅರಣ್ಯ ಮತ್ತು ತೋಟಗಾರಿಕೆ ವಿಭಾಗ

ಪ್ರಾಧಿಕಾರದ ಬಡಾವಣೆಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ ಕಾರ್ಯಗಳು, ನಿರ್ವಹಣಾ ಕಾರ್ಯಗಳು ಮತ್ತು ನೆಡುತೋಪುಗಳನ್ನು ಬೆಳೆಸುವುದು ಮತ್ತು ಪ್ರಾಧಿಕಾರದ ವಾಣಿಜ್ಯ ಸಂಕೀರ್ಣಗಳಲ್ಲಿರುವ ಉದ್ಯಾನವನಗಳನ್ನು ನಿರ್ವಹಿಸುವ ಹಾಗೂ 12 ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು 3070 ಲಕ್ಷ ರೂಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಇದುವರೆವಿಗೂ ರೂ. 118.19 ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ.

## 15. ಇಡಿಪಿ ವಿಭಾಗ

### ಗಣಕಯಂತ್ರ ವಿಭಾಗದ 2007-08ನೇ ಸಾಲಿನ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತಿರುತ್ತವೆ:

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳ ವೇತನ ಪಟ್ಟಿಯ ತಯಾರಿಕೆ.

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ಗಣಕಯಂತ್ರದ ತರಬೇತಿಯನ್ನು ಸಿ.ಎಮ್.ಸಿ ವತಿಯಿಂದ ನೀಡಲಾಗಿದೆ.

3. ಭೂಸ್ವಾಧೀನ ಮತ್ತು ಆಡಳಿತ ಶಾಖೆಯಲ್ಲಿ ಬಾಕಿಯಿರುವ ವಿಷಯಗಳನ್ನು ಗಣಕಯಂತ್ರದಲ್ಲಿ ಅಳವಡಿಸಲಾಗಿದೆ.

4. ಈ ಕೆಳಕಂಡ ಶಾಖೆಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನಿಯೋಜಿಸಿ ಆ ಶಾಖೆಗೆ ಸಂಬಂಧಪಟ್ಟ ದೈನಂದಿನ ಕಾರ್ಯವಹಿಗಳನ್ನು ನಿರ್ವಹಿಸಲು ಸೂಚಿಸಲಾಗಿರುತ್ತದೆ.

1. ಉಪಕಾರ್ಯದರ್ಶಿಗಳ ವಿಭಾಗ
2. ಆರ್ಥಿಕ ವಿಭಾಗ
3. ಎಸ್ಟೇಟ್ ವಿಭಾಗ
4. ಅರಣ್ಯಸಂರಕ್ಷಣ ವಿಭಾಗ
5. ಕಾನೂನು ವಿಭಾಗ
6. ಭೂ ಸ್ವಾಧೀನ ವಿಭಾಗ
7. ಸಾರ್ವಜನಿಕ ಸಂಪರ್ಕಾಧಿಕಾರಿ ವಿಭಾಗ
8. ಕಾರ್ಯದರ್ಶಿ ವಿಭಾಗ
9. ನಗರ ಯೋಜಕ ವಿಭಾಗ
10. ಅಭಿಯಂತರ ವಿಭಾಗ
11. ನಾಲ್ಕು ಉಪವಿಭಾಗಗಳು (ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ)

5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿಯವರ ಶಾಖೆಯಲ್ಲಿ ಪ್ರಾಧಿಕಾರದ ಸಭೆಯ ನಡೆವಳಿಗಳನ್ನು ಸ್ಕ್ಯಾನ್ ಮತ್ತು ಡಿಜಿಟೈಸ್ಡ್ ಮಾಡಲಾಗಿರುತ್ತದೆ.

6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನು ವಿಭಾಗದಲ್ಲಿ ಕೋರ್ಟಿಗೆ ಸಂಬಂಧಪಟ್ಟ ಆದೇಶದ ಪ್ರತಿ ಮತ್ತು ಪೆಟೀಷನ್ಸ್ ಫೈಲುಗಳನ್ನು ಸ್ಕ್ಯಾನ್ ಮತ್ತು ಡಿಜಿಟೈಸ್ಡ್ ಮಾಡಲಾಗುತ್ತಿದೆ.

7. ಪ್ರಾಧಿಕಾರದ ನೌಕರರು ಮತ್ತು ಮೆ॥ ಹೆಚ್.ಸಿ.ಎಲ್.ಟಿ. ಸಂಸ್ಥೆಯ ಸಿಬ್ಬಂದಿಗಳ ಸಂವಹನದೊಂದಿಗೆ ಈ ಕೆಳಕಂಡ ಶಾಖೆಗೆ ಸಂಬಂಧಪಟ್ಟಂತೆ ಎಸ್.ಆರ್.ಎಸ್. ಪರಿಷ್ಕೃತ ಮಾಡ್ಯೂಲ್‌ಗಳನ್ನು ತಯಾರಿಸಲಾಗುತ್ತದೆ.

1. ಭೂಸ್ವಾಧೀನ ವಿಭಾಗ
2. ಹಂಚಿಕೆ ವಿಭಾಗ (ಮುನ್ನ ಮತ್ತು ತದನಂತರ)
3. ರೆವಿನ್ಯೂ ವಿಭಾಗ (ಕಂದಾಯ ಬಿಲ್)
4. ಕಾನೂನು ವಿಭಾಗ.

8. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಲ್ಕು ಉಪ ವಿಭಾಗಗಳಿಗೆ (ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ) ಇಂಟರ್‌ನೆಟ್ ಮತ್ತು ವ್ಯಾನ್ ಕನೆಕ್ಷನ್‌ಗಳನ್ನು ಒದಗಿಸಲಾಗಿರುತ್ತದೆ.

9. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಗಣಕಯಂತ್ರಗಳ ಉಸ್ತುವಾರಿಯನ್ನು ನಿರ್ವಹಿಸಲಾಗುತ್ತಿದೆ.

10. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿಗಳ ಸಂವಹನದೊಂದಿಗೆ ಈ ಕೆಳಕಂಡ ಶಾಖೆಗೆ ಸಂಬಂಧಪಟ್ಟಂತೆ ಎಸ್.ಆರ್.ಎಸ್. ಪರಿಷ್ಕೃತ ಮಾಡ್ಯೂಲ್‌ಗಳನ್ನು ತಯಾರಿಸಲಾಗುತ್ತಿದೆ.

1. ನಗರ ಯೋಜನಾ ವಿಭಾಗ
2. ಅಭಿಯಂತರ ವಿಭಾಗ

ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.